ದುರುಪಯೋಗವಾಗಿದೆ. ಅಲ್ಲಿ ಚಿನ್ನಪ್ಪ ಎನ್ನುವವರು ಇವತ್ತಿನ ದಿವಸ ಡಿ.ಸಿ.ಸಿ ಬ್ಯಾಂಕಿನ ಡೈರೆಕ್ಟರ್ ಸ್ಥಾನಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ.

ಅಧ್ಯಕ್ಷರು: ಅದರ ಮೇಲೂ ಕ್ರಮ ಜರುಗಿಸಲಿಕ್ಕೆ ಹೇಳಲಾಗುವುದು.. ಮಾನ್ಯ ಎಸ್.ಎಸ್.ಪಾಟೀಲರು, ಶ್ರೀ ಅಪ್ಪಚ್ಚುರಂಜನ್ ರವರು ಹೇಳಿದ ವಿಷಯದ ಕಡೆಗೂ ತಾವು ಗಮನಕೊಡಬೇಕು. ಸಂಬಂಧಪಟ್ಟ ಸದಸ್ಯರುಗಳು ಕೆಲವು ವಿಚಾರಗಳ ಮೇಲೆ ಈ ಸದನದಲ್ಲಿ ಹೇಳಿ ಅದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ....

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಏಕೆಂದರೆ ಈ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಅವರೇ ಡೈರೆಕ್ಟರ್ ಆಗಿ ಬಂದರೆ ಪುನಃ ಸೊಸೈಟಿಯ ಆಡಳಿತವನ್ನು ಅವರೇ ಮಾಡುತ್ತಾರೆ....

ಅಧ್ಯಕ್ಷರು: ಅಪ್ಪಚ್ಚುರಂಜನ್‌ರವರೇ, ಒಂದ್ನಿಮಿಷ ಇರಿ, ನಿಮ್ಮ ಪರವಾಗಿ ನಾನೇ ಮಾತನಾಡುತ್ತೇನೆ. ಸದಸ್ಯರು ಇಲ್ಲಿ ಒಂದು ವಿಚಾರ ಪ್ರಸ್ತಾಪ ಮಾಡಿ ಅದರ ಮೇಲೆ ಸರ್ಕಾರ ಏನೂ ಕ್ರಮ ಜರುಗಿಸಲಿಲ್ಲವೆಂದರೆ ಸದನಕ್ಕೆ, ಸದಸ್ಯರು ಹೇಳಿದ ಮಾತಿಗೆ ಬೆಲೆ ಬರುವುದಿಲ್ಲ. ಮಾನ್ಯ ಸಹಕಾರ ಸಚಿವರಾದ ತಾವು ಇಂಥ ವಿಚಾರಗಳಲ್ಲಿ ಬಹಳ ಪ್ರಾಮಾಣಿಕರು ಇದ್ದೀರಿ. ದಯಮಾಡಿ ಮಾನ್ಯ ಸದಸ್ಯರಾದ ಅಪ್ಪಚ್ಚುರಂಜನ್ ರವರು ಹೇಳಿರುವ ವಿಚಾರದ ಕಡೆಗೂ ಕೂಡ ಗಮನಕೊಟ್ಟು ತಾವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಆಯಿತು, ಅದನ್ನು ಮಾಡುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು: ಆಯಿತು, ನಿಮ್ಮ ಕೆಲಸವನ್ನು ನಾನು ಮಾಡಿದ್ದೇನೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಮೊನ್ನೆಯ ವಿಷಯದ ಬಗ್ಗೆ ಸಚಿವರು ಹೇಳಿಕೆಯನ್ನು ಕೊಡಲಿಲ್ಲ.

ಅಧ್ಯಕ್ಷರು: ಆನಂತರ ಮಾನ್ಯ ಸಚಿವರ ಹೇಳಿಕೆಯನ್ನು ಕೊಡಿಸುತ್ತೇನೆ.

ಇ) ಹುಣಸೂರು ವಿಧಾನ ಸಭಾಕ್ಷೇತ್ರದಲ್ಲಿ ಖಾಯಂ ಸಾಗುವಳಿ ಪತ್ರವನ್ನು ನೀಡದೇ ಇರುವ ಬಗ್ಗೆ

+ ಶ್ರೀ ಸಿ.ಹೆಚ್.ವಿಜಯಶಂಕರ್ (ಹುಣಸೂರು): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಕುಪ್ಪೆಕೊಳಗೊಟ್ಟ ಎನ್ನುವಂಥ ಒಂದು ಗ್ರಾಮದಲ್ಲಿ 1991ರಲ್ಲಿ ಕೇಂದ್ರ ಸರ್ಕಾರದ ಯೋಜನೆ ಮುಖಾಂತರ ಅಂದಾಜು 837 ಎಕರೆ 27 ಗುಂಟೆ ಜಮೀನನ್ನು ಸರ್ಕಾರ

ಸ್ವಾಧೀನಪಡಿಸಿಕೊಂಡಿತು. ಹಾಗೆ ಸ್ವಾಧೀನ ಮಾಡಿಕೊಂಡಂಥ ಜಮೀನಿನ ರೈತರು ಯಾರು ಇದ್ದಾರೆ ಅವರು ಈ ಹಿಂದೆ 1924ರಲ್ಲಿ ಕನ್ನಂಬಾಡಿ ಕಟ್ಟೆ ಕಟ್ಟತಕ್ಕಂಥ ಸಮಯದಲ್ಲಿ ಸಾಗರಕಟ್ಟೆ ಎನ್ನುವಂಥ ಗ್ರಾಮದಿಂದ ತೆರವು ಮಾಡಿದಂಥ ಜನರು ಇವರಾಗಿರುತ್ತಾರೆ. ಇವರೆಲ್ಲರೂ ಸಹ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದಂಥ ಜನರಾಗಿದ್ದಾರೆ. ಇವರಿಗೆ ಪರಿಹಾರಾರ್ಥವಾಗಿ 837 ಎಕರೆ 27 ಗುಂಟೆ ಜಮೀನನ್ನು ಆಗ ಸರ್ಕಾರ ಇವರಿಗೆ ಕೊಟ್ಟಿರುವಂಥದ್ದಾಗಿರುತ್ತದೆ. ಯಾರ್ಯಾರು ಬುದ್ಧಿವಂತ ರೈತರು ಇದ್ದಾರೆ, ಅವರು ಅಂದಾಜು 702 ಎಕರೆ ಜಮೀನಿಗೆ ಹಕ್ಕುಪತ್ರವನ್ನು ಪಡೆದರು. ಉಳಿದಂಥ 135 ಎಕರೆ ಜಮೀನಿಗೆ ಹಕ್ಕುಪತ್ರ ಪಡೆಯುವಂಥ ಕೆಲಸ ಆ ರೈತರಿಂದ ಆಗಲಿಲ್ಲ. ಅದರಲ್ಲಿ 47 ಎಕರೆ 37 ಗುಂಟೆ ಜಮೀನಿನಲ್ಲಿ ಹಂಗಾಮಿ ಸಾಗುವಳಿ ಕಳೆದ 40 ವರ್ಷದಿಂದ ನಡೆಯುತ್ತಿದೆ. ಇವರಿಗೆ ನೋಟಿಫಿಕೇಷನ್ 4: 1, 6: 1, 9: 1 ಮತ್ತು 10: 1 ಕೂಡ ಆಗಿದೆ. ಇದರಲ್ಲಿ 837 ಎಕರೆ 27 ಗುಂಟೆ ಯಲ್ಲಿ 702 ಎಕರೆಗೆ ಮಾತ್ರ ಸರ್ಕಾರ ಪರಿಹಾರ ಕೊಟ್ಟಿದ್ದು, ಉಳಿದಂಥ 135 ಎಕರೆ ಜಮೀನಿಗೆ ಇಲ್ಲಿಯವರೆಗೆ ಕೂಡ ಸರ್ಕಾರ ಪರಿಹಾರ ಕೊಡಲಿಲ್ಲ. 47 ಎಕರೆ 37 ಗುಂಟೆ ಜಮೀನಿನಲ್ಲಿ ಹಂಗಾಮಿ ಸಾಗುವಳಿ ಮಾಡುವಂಥವರಿಗೆ 1993ರಲ್ಲಿ ಅಕ್ರಮ ಸಕ್ರಮ ಸಮಿತಿಯ ಮುಂದೆ ಇವರಿಗೆ ಖಾಯಂ ಹಕ್ಕುಪತ್ರವನ್ನು ನೀಡಲಾಗಿದೆ. ಮತ್ತು ಉಳಿದಂಥ ರೈತರೂ ಕೂಡ 1991ರಲ್ಲಿ ಖಾಯಂ ಹಕ್ಕುಪತ್ರಕ್ಕೆ ಅಕ್ರಮ-ಸಕ್ರಮ ಸಮಿತಿಯ ಮುಂದೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಈ ರೈತರಿಗೆ ಸ್ವಾಧೀನ ತೆರವು ಮಾಡುವಂಥ ಸಮಯದಲ್ಲಿ ನಮ್ಮ ಸ್ಪೆಷಲ್‌ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ರವರು ಮತ್ತು ಆ ರಕ್ಷಣಾ ಇಲಾಖೆಯ ಅಧಿಕಾರಿ ಹೀಗೆ ಇಬ್ಬರೂ ಸ್ಥಳಕ್ಕೆ ಹೋಗಿ-'ನಿಮಗೆ ಬೇಕಾದಂಥ ಹಣವನ್ನು ಈಗಾಗಲೇ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ಗೆ ನಾವು ಡಿಫಾಸಿಟ್ ಮಾಡಿದ್ದೇವೆ,' 'ನಿಮ್ಮ ದಾಖಲಾತಿಗಳನ್ನು ಸರಿಮಾಡಿಕೊಂಡು ನೀವು ಪರಿಹಾರವನ್ನು ತೆಗೆದುಕೊಳ್ಳಿ ಎನ್ನುವಂಥ ಮಾತನ್ನು ಭರವಸೆ ಕೊಟ್ಟಿದ್ದಾರೆ. ಈಗಾಗಲೇ ಕೂಡ ಕೇಂದ್ರ ಸರ್ಕಾರ ಆ ಹಣವನ್ನು ನಮ್ಮ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ರವರ ಕಛೇರಿಯಲ್ಲಿ ಡಿಫಾಸಿಟ್ ಮಾಡಿದ್ದಾರೆ. ಇವರ ದಾಖಲಾತಿಯಲ್ಲಿ ಇವರು ಬಗರ್ ಹುಕುಂ, ಹಂಗಾಮಿ ಸಾಗುವಳಿದಾರರು ಎಂಬ ಏಕೈಕ ಕಾರಣಕೋಸ್ಕರವಾಗಿ ಕೊಟ್ಟಿರುವುದಿಲ್ಲ. ಇವರು ಅತಿ ಸಣ್ಣ ಹಿಡುವಳಿದ್ದಾರರು. ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಈ ಜನರಿಗೆ ಇದುವರೆಗೂ ಸಹ ಸರ್ಕಾರ ಪರಿಹಾರವನ್ನು ಕೊಟ್ಟಿಲ್ಲ. ಹೀಗಾಗಿ ಈ ಜನರು ಬೀದಿಪಾಲಾಗಿದ್ದಾರೆ. ಆದ್ದರಿಂದ ನಾನು ಸರ್ಕಾರದವರಲ್ಲಿ ವಿನಂತಿಯನ್ನು ಮಾಡುವುದೇನೆಂದರೆ ಈಗಾಗಲೇ ಡೆಪಾಸಿಟ್ ರೆಡಿ ಇದೆ. ಇವರುಗಳು ಕಳೆದ 40 ವರ್ಷಗಳಿಂದ ಹಂಗಾಮಿ ಸಾಗುವಳಿದಾರರಾಗಿದ್ದಾರೆ; ಕಳೆದ 60 ವರ್ಷಗಳಿಂದ ಈ 135 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿರತಕ್ಕಂತಹ ಜನರಿಗೆ ಅನುಭವ ಇದೆ. 30 ವರ್ಷಗಳಿಗಿಂತಲೂ ಹೆಚ್ಚು ಅನುಭವ ಇರತಕ್ಕಂಥವರಿಗೆ ಅವರು ಖಾಯಂ ಹಕ್ಕುದಾರರಾಗುತ್ತಾರೆಂದು

ಸರ್ಕಾರದ ನೀತಿ ಇದೆ. 12 ವರ್ಷಗಳಿಗಿಂತಲೂ ಹೆಚ್ಚು ಖಾಸಗಿ ಜಮೀನನ್ನು ಸಾಗುವಳಿ ಮಾಡುತ್ತಿದ್ದರೆ ಅವರಿಗೆ ಖಾಯಂ ಹಕ್ಕು ಪತ್ರವನ್ನು ಕೊಡಬೇಕೆಂಬ ಸರ್ಕಾರದ ನೀತಿ ಇದೆ. ನಾನು ಅಕ್ರಮ ಸಕ್ರಮ ಸಮಿತಿಯ ಅಧ್ಯಕ್ಷನಾಗಿದ್ದರೂ ಕೂಡ, ಈ ಸರ್ಕಾರದ ನಿಲುವಿನಿಂದ ಅವರಿಗೆ ಖಾಯಂ ಸಾಗುವಳಿ ಪತ್ರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಪರಿಹಾರವನ್ನೂ ಕೂಡ ಸರ್ಕಾರ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮಾನವೀಯತೆಯ ದೃಷ್ಟಿಯಿಂದ ಸರ್ಕಾರ ಎಲ್ಲಾ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಂಡು ಆ ವರ್ಗಕ್ಕೆ ನ್ಯಾಯವನ್ನು ಒದಗಿಸಿ ಈಗ ಏನು ಕೇಂದ್ರ ಸರ್ಕಾರದವರು ಡೆಪಾಸಿಟನ್ನು ಮಾಡಿದ್ದಾರೆ ಅದನ್ನು ರೈತರಿಗೆ ಪರಿಹಾರವನ್ನೂ ಕೊಡುವುದರ ಸಹಾಯಕ್ಕೆ ಬರಬೇಕು, ಬೀದಿ ಪಾಲಾಗಿರತಕ್ಕಂತಹ ಜನರ ರಕ್ಷಣೆಯನ್ನು ಸರ್ಕಾರ ಮಾಡಬೇಕು. ಇದರ ಬಗ್ಗೆ ಸ್ಪಷ್ಟ ಭರವಸೆಯನ್ನು ಸರ್ಕಾರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೇ, ಹುಣಸೂರು ತಾಲ್ಲೂಕಿನ ಗ್ರಾಮದಲ್ಲಿ 135 ಎಕರೆ ಜಮೀನಿನ ವಿಚಾರದಲ್ಲಿ ರೈತರು ಬಗರ್ ಹುಕುಂ ಸಾಗುವಳಿಯನ್ನು ಮಾಡುತ್ತಿರುವುದರಿಂದಾಗಿ ಇನ್ನೂ ಹಕ್ಕು ಪತ್ರಗಳನ್ನು ಕೊಟ್ಟಿಲ್ಲ. ಕೇಂದ್ರ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿದ್ದಾರೆ ಆದರೂ ಸಹ ರಾಜ್ಯ ಸರ್ಕಾರದವರು ಹಣವನ್ನು ಕೊಡುವುದರಲ್ಲಿ ಅಡ್ಡಿ ಬಂದಿದ್ದಾರೆ ಎನ್ನುವಂತಹ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಮಾನ್ಯ ಕಂದಾಯ ಸಚಿವರಿಂದ ಹಾಗೂ ಸರ್ಕಾರದ ವತಿಯಿಂದ ಆ ಪರಿಹಾರ ನ್ಯಾಯಬದ್ಧವಾಗಿ ಬರುವುದಿದ್ದರೆ ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

(ಈ) ವಿಷಯ: ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಜವಳಿನಗರ ಸ್ಥಾಪನೆ,

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿಗ್ರಾಮಾಂತರ): ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಜವಳಿ ನಗರವನ್ನು ಸ್ಥಾಪನೆಯನ್ನು ಮಾಡಬೇಕೆಂದು ಹಿಂದೆ ಅಧಿಕಾರದಲ್ಲಿದ್ದ ಸರ್ಕಾರ ಕೂಡ ನಿರ್ಧಾರ ಮಾಡಿತ್ತು ಹಾಗೂ ಈಗಿನ ಸರ್ಕಾರ ಕೂಡ ನಿರ್ಧಾರವನ್ನು ಮಾಡಿದೆ, ಇದರ ಸುತ್ತಮುತ್ತಲಿನಲ್ಲಿರುವ ನಗರ ಪ್ರದೇಶಗಳು ಗದಗ್ ಇರಲಿ, ಬೈಲಹೊಂಗಲ ಇರಲಿ, ಗೋಕಾಕ್, ಸವದತ್ತಿ ಈ ಎಲ್ಲಾ ಕಡೆಗಳಲ್ಲಿಯೂ ಹತ್ತಿಯ ವ್ಯವಹಾರ ಏನಿದೆ ಅದು ಅತ್ಯಂತ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಹೀಗಾಗಿ ಹುಬ್ಬಳ್ಳಿಯಲ್ಲಿ ಜವಳಿ ನಗರವನ್ನು ಸ್ಥಾಪನೆ ಮಾಡುವಂಥದ್ದು ಅತಿ ಅವಶ್ಯಕತೆ ಇದೆ. ಆದರೆ ಇತ್ತೀಚಿನ ಕೆಲವೊಂದು ವರದಿಗಳನ್ನು ನೋಡಿದಾಗ, ಇತ್ತೀಚಿನ ಕೆಲವು ವದಂತಿಗಳನ್ನು ಕೇಳಿದರೆ ಸರ್ಕಾರ ಏನು ಜವಳಿ ನಗರವನ್ನು ಸ್ಥಾಪನೆ ಮಾಡಬೇಕೆಂದು ನಿರ್ಧಾರ ಮಾಡಿತ್ತು ಅದನ್ನು ಕೈಬಿಡಲಾಗುತ್ತಿದೆ ಎನ್ನುವಂಥದ್ದು